**ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕುಂದಾಪುರ.**

**ಪಿಡಬ್ಲ್ಯೂ:6**

**ಸ್ಪೆಷಲ್ ಕೇಸ್ ಸಂಖ್ಯೆ:506/23 ಸಿಡಬ್ಲ್ಯೂ:7**

**ಸಾಕ್ಷಿದಾರರ ಹೆಸರು** : ಪ್ರಮೋದ್ ನಾಯ್ಕ
ತಂದೆ **ಹೆಸರು** : ಶ್ರೀನಿವಾಸ ನಾಯ್ಕ
**ವಯಸ್ಸು** : **38**
**ವೃತ್ತಿ** : ಆಟೋ ಚಾಲಕ
**ವಾಸ** : ಕಂಚಗೋಡು, ಗುಜ್ಜಾಡಿ ಗ್ರಾಮ

**ದಿನಾಂಕ: 09-10-2025 ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ**

ನನಗೆ ಆರೋಪಿತರ ಕುಟುಂಬದವರ ಮತ್ತು ಫಿರ್ಯಾದಿದಾರರ ಕುಟುಂಬದವರ ಪರಿಚಯ ಇದೆ. ಗುಜ್ಜಾಡಿ ಗ್ರಾಮದ ಹೋಲಿ ಕ್ರಾಸ್ ಆಶ್ರಮದ ಬಳಿ ಶ್ರೀಮತಿ ದೇವಿ ರವರ ಕುಟುಂಬ ಇರುತ್ತದೆ. ಹೋಲಿ ಕ್ರಾಸ್ ಆಶ್ರಮದ ಬಳಿ ಪಿಡಬ್ಲ್ಯುಡಿ ಇಲಾಖೆಗೆ ಸಂಬಂಧಪಟ್ಟ ಜಾಗದಲ್ಲಿ ಆರೋಪಿತರು ಸಣ್ಣ ಶೆಡ್ ಕಟ್ಟಿಕೊಂಡು ಫಾಸ್ಟ ಫುಡ್ ವ್ಯಾಪಾರಕ್ಕೆ ಸಂಬಂಧಪಟ್ಟ ಅಡುಗೆಯನ್ನು ತಯಾರಿಸಿ ತ್ರಾಸಿ ಜಂಕ್ಷನ್ ಬಳಿ ವ್ಯಾಪಾರ ಮಾಡುತ್ತಾರೆ. ಆರೋಪಿತರು ಭಾರತ್ ನಗರದ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತಾರೆ. ಆರೋಪಿತರು ಶೆಡ್ ನಿರ್ಮಿಸಿಕೊಂಡು ವಿದ್ಯುತ್ ಸಂಪರ್ಕ ಪಡೆದುಕೊಂಡ ಬಗ್ಗೆ ದೇವಿ ರವರ ಮನೆಯವರು ಸಂಬಂಧಪಟ್ಟ ಇಲಾಖೆಗಳಿಗೆ ಆಕ್ಷೇಪಣೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿದೆ.

ದಿನಾಂಕ:16-02-2022 ರಂದು ನಾನು ರಾತ್ರಿ ಸುಮಾರು 8.00 ಗಂಟೆಗೆ ಸಮಯಕ್ಕೆ ರಿಕ್ಷಾ ಬಾಡಿಗೆ ಮಾಡುತ್ತಿದ್ದಾಗ ದೇವಿಯ ಸಂಬಂಧಿಯಾದ ಕೃಷ್ಣಮೂರ್ತಿ ರವರು ನನಗೆ ಫೋನ್ ಮಾಡಿ ಹೋಲಿ ಕ್ರಾಸ್ ಹತ್ತಿರ ಬರಲು ಹೇಳಿರುತ್ತಾರೆ. ನಾನು ಕೂಡಲೇ ಅವರ ಮನೆ ಹತ್ತಿರ ಹೋಗಿ ನೋಡಿದಾಗ ಭಾರತಿ ಗಾಣಿಗ ರವರ ಶೆಡ್ ಹಿಂಭಾಗ ದೇವಿ, ಅವರ ಮಗಳು ಶೈಲಾ, ಜಯಂತಿ ಅವಳ ಗಂಡ ಚಂದ್ರಶೇಖರ, ಅಕ್ಕಮ್ಮ ಮತ್ತು ಕೃಷ್ಣಮೂರ್ತಿ ಇದ್ದರು. ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಭಾರತಿ ಗಾಣಿಗ ಅವಳ ಮಗ ಕೀರ್ತಿ ರಾಜ್ ಹಾಗೂ ಅವಳ ತಮ್ಮ

ನಾಗರಾಜ ಗಾಣಿಗ ಶೌಚಾಲಯದ ಗುಂಡಿ ತೆಗೆಯುತ್ತಿದ್ದರು. ದೇವಿ ಮತ್ತು ಕುಟುಂಬದವರು ಅದಕ್ಕೆ ಆಕ್ಷೇಪ ಮಾಡುತ್ತಿದ್ದರು. ಆರೋಪಿತರು ಫಿರ್ಯಾದಿದಾರರ ಕುಟುಂಬದವರಿಗೆ ಕೈಯೆತ್ತಿ ಹೊಡೆಯಲು ಬಂದು ನೀವು ಕೂಸಾಳು ಜಾತಿಯವರು, ಬೇವರ್ಷಿ ರಂಡೆ ಮಕ್ಕಳು ಏನು ಮಾಡಿಕೊಳ್ಳುತ್ತೀರಿ ಎಂದು ಅವಾಚ್ಯವಾಗಿ ಬೈದು ಜಾತಿ ನಿಂದನೆ ಮಾಡಿ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆ ಹಾಕಿರುತ್ತಾರೆ. ಆಗ ನಾನು ಭಾರತಿ ಗಾಣಿಗ ಕುಟುಂಬದವರಿಗೆ ಮತ್ತು ದೇವಿ ಕುಟುಂಬದವರಿಗೆ ಸಮಾಧಾನ ಮಾಡಿರುತ್ತೇನೆ. ಭಾರತಿ ಗಾಣಿಗ ರವರು ಅವರ ಶೆಡ್ ಹಿಂಭಾಗದಲ್ಲಿ ಶೌಚಾಲಯ ನಿರ್ಮಿಸಿದರೆ ಮುಂದೆ ತಮಗೆ ರಸ್ತೆ ಮಾಡಲು ತೊಂದರೆ ಆಗುತ್ತದೆ ಎಂದು ದೇವಿ ಮತ್ತು ಅವರ ಕುಟುಂಬದವರು ಆಕ್ಷೇಪ ಮಾಡಿದ್ದಕ್ಕೆ ಆರೋಪಿತರು ಈ ಕೃತ್ಯ ಮಾಡಿರುತ್ತಾರೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುತ್ತಾರೆ. ನ್ಯಾಯಾಲಯದ ಮಂದಿರುವ ಆರೋಪಿತರನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ</u> ಆರೋಪಿತರ ಪರ ವಕೀಲರಾದ ಶ್ರೀ ಕೆ ಪಿ ಕೆ ಎಸ್ ರವರಿಂದ**

ಚಾಸಾ.2 ಕೃಷ್ಣಮೂರ್ತಿ 7 – 8 ವರ್ಷದಿಂದ ನನ್ನ ಸ್ನೇಹಿತ ಎಂದರೆ ಸರಿ. ಅವರ ಸುಖ ದುಃಖದಲ್ಲಿ ನಾನು ಪಾಲ್ಗೊಳ್ಳುತ್ತೇನೆ ಹಾಗೂ ನನ್ನ ಸುಖ ದುಃಖದಲ್ಲಿ ಅವರು ಪಾಲ್ಗೊಳ್ಳುತ್ತಾರೆ ಎಂದರೆ ಸರಿ. ನಮ್ಮ ಮನೆಯಿಂದ ಫಿರ್ಯಾದಿ ಕೊಟ್ಟಂತಹಾ ದೇವಿ ರವರ ಮನೆ ಒಂದೂವರೆ ಕಿ.ಮೀ. ದೂರದಲ್ಲಿದೆ. ಫಿರ್ಯಾದಿ ಮತ್ತು ಆರೋಪಿತರ ನಡುವೆ ಜಾಗಕ್ಕೆ ಸಂಬಂಧಪಟ್ಟಂತೆ ತಕರಾರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಊರಿನಲ್ಲಿ ಸಮಾಜ ಸೇವೆ ಕೆಲಸ ನಾನು ಮಾಡುತ್ತೇನೆ ಮತ್ತು ಅಲ್ಲಿ ನಡೆಯುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸರ್ವೇ ನಂಬ್ರ 145 ಗುಜ್ಜಾಡಿ ಗ್ರಾಮದ್ದು ಸರಕಾರಿ ಸ್ತಳ ಎಂದರೆ ಹೌದು. ಸದ್ರಿ ಸರ್ವೇ ನಂಬ್ರ 145/1 ಎ ರಲ್ಲಿ 2.05 ಎಕ್ರೆ ಜಾಗ ಫಿರ್ಯಾದಿಯ ತಾಯಿ ವೆಂಕು ಹೆಂಗ್ಸು ಇವಳಿಗೆ ಮಂಜೂರಾದ ವಿಷಯ ನನಗೆ ಗೊತ್ತಿಲ್ಲ. ಫಿರ್ಯಾದಿದಾರರ ಜಾಗ ಇರುವುದು ಗೊತ್ತು ಆದರೆ ಅದರ ಸರ್ವೇ ನಂಬ್ರದ ಬಗ್ಗೆ ನನಗೆ ಗೊತ್ತಿಲ್ಲ. ಫಿರ್ಯಾದಿ ಜಾಗಕ್ಕೆ ಸಂಬಂಧಪಟ್ಟಂತೆ ನನಗೆ ಯಾವುದೇ ಮಾಹಿತಿ ಇಲ್ಲಾ ಆದರೆ ಫಿರ್ಯಾದಿಗೆ ಸಂಬಂಧಪಟ್ಟ ಜಾಗ ಎಂದು ನನಗೆ ಗೊತ್ತು. ಫಿರ್ಯಾದಿಗೆ ಸೇರಿದ ಜಾಗದಲ್ಲಿ ಮನೆ ಇದೆ. ಆ ಜಾಗದಲ್ಲಿ ಎರಡು ಮನೆಗಳು ಇವೆ. ನಾನು ಪೋಲೀಸರಿಗೆ ಹೇಳಿಕೆ ನೀಡುವಾಗ ದೇವಿ ರವರ ಮನೆಯವರು ಅವರ ಖಾಲೀ ಸ್ತಳದಲ್ಲಿ ಮನೆ ಕಟ್ಟಿ ಬಾವಿ ನಿರ್ಮಿಸಿದಾದಲ್ಲಿ ತೊಂದರೆ ಆಗುತ್ತದೆ ಎಂದು ತಿಳಿದು ಭಾರತಿ ಗಾಣಿಗ ರವರಲ್ಲಿ ಶೌಚಾಲಯ ಗುಂಡಿ ತೋಡದಂತೆ

ಆಕ್ಷೇಪಿಸಿದ್ದರು ಅಂತ ಪೋಲೀಸರ ಮುಂದೆ ಹೇಳಿಕೆ ನೀಡಿಲ್ಲ. ಸದ್ರಿ ಹೇಳಿಕೆ ಭಾಗವನ್ನು ನಿಡಿ-2 ಎಂದು ಗುರುತಿಸಲಾಯಿತು. ಆರೋಪಿತರು ಮನೆ ಕಟ್ಟಿಕೊಂಡಿದ್ದ ಜಾಗ ಗುಜ್ಜಾಡಿ ಗ್ರಾಮದ ಸರಕಾರಿ ಸರ್ವೇ ನಂಬ್ರ 7 ರಲ್ಲಿ ಎಂದರೆ ಸಾಕ್ಷಿ ಅದು ಮನೆಯಲ್ಲ ಶೆಡ್ ಆಗಿರುತ್ತದೆ ಆ ಸ್ಥಳದಲ್ಲಿ ಶೆಡ್ ಇರುತ್ತದೆ ಅಂತ ನುಡಿಯುತ್ತಾರೆ. ನನ್ನ ಪ್ರಕಾರ ವಾಸ್ತವ್ಯ ಇದ್ದರೆ ಮಾತ್ರ ಅದು ಮನೆ ಇಲ್ಲವಾದರೆ ಅದು ಶೆಡ್ ಆಗಿರುತ್ತದೆ. ನಿಪಿ-4 ರಲ್ಲಿ ಕಂಡು ಬರುವಂತಹಾ ಕಟ್ಟಡದ ಚಿತ್ರವನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅದು ಮನೆ ಅಲ್ಲಾ ಶೆಡ್ ಆಗಿರುತ್ತದೆ ಅಂತ ನುಡಿಯುತ್ತಾರೆ. ಸದ್ರಿ ನಿಪಿ-4 ರಲ್ಲಿ ಕಾಣಿಸಿದ ಕಟ್ಟಡಕ್ಕೆ ಗೋಡೆ ಇದ್ದು, ಕಿಟಕಿವುಳ್ಳ ಮನೆಯಾಗಿದ್ದರೂ ಸಹಾ ಉದ್ದೇಶ ಪೂರಕವಾಗಿ ಅದು ಶೆಡ್ ಅಂತ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ಫಿರ್ಯಾದಿದಾರರಿಗೆ ಮಂಜೂರಾದ ಸ್ಥಳದ ಸರ್ವೇ ನಂಬ್ರ ಬೇರೆಯಾಗಿದ್ದು ಮತ್ತು ಆರೋಪಿ ವಾಸವಾಗಿದ್ದ ಸ್ಥಳದ ಸರ್ವೇ ನಂಬ್ರ ಬೇರೆ ಬೇರೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ ಅಂತ ಸಾಕ್ಷಿ ನುಡಿಯುತ್ತಾರೆ. ಆರೋಪಿತರು ಸದ್ರಿ ಸ್ಥಳದಲ್ಲಿ 25 ವರ್ಷದಿಂದ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ ಆದರೆ 15 ವರ್ಷದಿಂದ ವಾಸವಾಗಿದ್ದಾರೆ. ಫಿರ್ಯಾದಿದಾರರು ಆರೋಪಿತರು ಅಲ್ಲಿ ವಾಸ ಮಾಡಬಾರದು ಎನ್ನುವ ಬಗ್ಗೆ ತಕರಾರು ಇದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರು ಇದ್ದಂತಹಾ ಮನೆಯನ್ನು ತೆರವುಗೊಳಿಸಬೇಕೆಂದೇ ಈ ಪ್ರಕರಣ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಗುಜ್ಜಾಡಿ ಗ್ರಾಮದ ಶಿಫಾರಸ್ಸಿನ ಮೇರೆಗೆ 1 ನೇ ಆರೋಪಿತಳು ವಾಸವಾಗಿದ್ದ ಮನೆಗೆ ಬೆಳಕು ಯೋಜನೆಯಲ್ಲಿ ವಿದ್ಯುತ್ ಸಂಪರ್ಕ ನೀಡಲಾಗಿದೆ ಎಂದರೆ ಆಗಿರಬಹುದು ನನಗೆ ಗೊತ್ತಿಲ್ಲ. ಫಿರ್ಯಾದಿದಾರರು ಆರೋಪಿತರಿಗೆ ನೀಡಲಾದ ವಿದ್ಯುತ್ ಸಂಪರ್ಕವನ್ನು ಖಡಿತಗೊಳಿಸಲು ಅರ್ಜಿ ನೀಡಿದರು ಎನ್ನುವ ಬಗ್ಗೆ ನಾನು ಕೇಳಿಸಿಕೊಂಡಿದ್ದು ಬಿಟ್ಟರೆ ನಾನು ಅವರ ಜೊತೆಗೆ ಯಾವುದೇ ಕಚೇರಿಗೆ ಹೋಗಿಲ್ಲ. ಚಾಸಾ.1 ರಿಂದ 6 ನೇಯವರು ದಿಃ21-02-2023 ರಂದು ಬೆಳಿಗ್ಗೆ 1 ನೇ ಆರೋಪಿತಳ ಮನೆಗೆ ಹೋಗಿ ಮನೆ ತೆರವುಗೊಳಿಸಬೇಕು ಇಲ್ಲವಾದರೆ ಜಾತಿ ನಿಂದನೆ ಪ್ರಕರಣ ದಾಖಲಿಸುತ್ತೇವೆ ಅಂತ ಬೆದರಿಕೆ ಹಾಕಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಅದೇ ದಿವಸ 1 ನೇ ಆರೋಪಿತಳು ಮನನೊಂದು ಆತ್ಮಹತ್ಯೆಗೆ ಪ್ರಯತ್ನ ಮಾಡಿದ ವಿಷಯ ನನಗೆ ಗೊತ್ತಿಲ್ಲ. ಅಂಬುಲೆನ್ಸು ಅವಶ್ಯಕತೆ ಇದೆ ಅಂತ ನನಗೂ ಸಹಾ ಆರೋಪಿತರ ಪರ ಜನರು ಫೋನ್ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ವಿಚಾರ ನನಗೆ ಫಿರ್ಯಾದಿದಾರರ ಮನೆಯವರು ಯಾವತ್ತೂ ಹೇಳಿಲ್ಲ. ದಿನಾಂಕಃ16-02-2023 ರಂದು ಆರೋಪಿ ಮತ್ತು ಫಿರ್ಯಾದಿದಾರರ ನಡುವೆ ತಕರಾರು ಆದ ವಿಚಾರ ನನಗೆ ಗೊತ್ತಾಯಿತು. ಫಿರ್ಯಾದಿದಾರರು ಆರೋಪಿತರ ವಿರುದ್ಧ ಫಿರ್ಯಾದಿ ಕೊಟ್ಟ ವಿಚಾರ ನನಗೆ ಗೊತ್ತು. ಯಾವ ತಾರೀಖಿಕೆ ಫಿರ್ಯಾದಿದಾರರು

ಆರೋಪಿತರ ವಿರುದ್ಧ ಫಿರ್ಯಾದಿ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1ನೇ ಆರೋಪಿತಳು ಆತ್ಮಹತ್ಯೆಗೆ ಪ್ರಯತ್ನ ಮಾಡಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಾದ ನಂತರ ಫಿರ್ಯಾದಿದಾರಳು ಪೋಲೀಸು ಠಾಣೆಯಲ್ಲಿ ಆರೋಪಿತರ ವಿರುದ್ಧ ಪ್ರಕರಣ ದಾಖಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಫಿರ್ಯಾದಿದಾರರಿಗೆ ನಿಮಗೆ ದೌರ್ಜನ್ಯ ಆಗಿದ್ದರೆ ಫಿರ್ಯಾದಿ ಕೊಡಬೇಕೆಂದು ನಾನು ತಿಳಿಸಿಲ್ಲ. ನಾನು ಸ್ಥಳಕ್ಕೆ ಹೋಗಿ ಸಮಾಧಾನ ಮಾಡಿದ ನಂತರ ಸ್ಥಳದಲ್ಲಿ ದೌರ್ಜನ್ಯ ಆಗಿದೆ ಎನ್ನುವ ಬಗ್ಗೆ ಪೋಲೀಸರಿಗೆ ಫೋನು ಮಾಡಿ ವಿಷಯ ತಿಳಿಸಿಲ್ಲ. ನಾನು ಸಮಾಧಾನ ಮಾಡಿದ ನಂತರ ದೌರ್ಜನ್ಯ ಆಗಿದೆ ಅಂತ ನನಗೆ ಮನವರಿಕೆ ಆಗಿದ್ದರಿಂದ ಕೂಡಲೇ ಪೋಲೀಸರಿಗೆ ದೌರ್ಜನ್ಯ ಆದ ವಿಷಯ ಪೋಲೀಸರಿಗೆ ತಿಳಿಸಲು ನಿಮಗೆ ಏನಾದರೂ ತೊಂದರೆ ಇತ್ತಾ ಎಂದರೆ ನನಗೆ ಏನು ತೊಂದರೆ ಇಲ್ಲಾ ಆದರೆ ಅವರು ಹೊಂದಾಣಿಕೆ ಮಾಡಿಕೊಂಡು ಹೋಗುತ್ತಾರೆ ಅಂತ ತಿಳಿದು ನಾನು ಪೋಲೀಸರಿಗೆ ಫೋನು ಮಾಡಿ ವಿಷಯ ತಿಳಿಸಿಲ್ಲ. ನಾನು ಸಾಕ್ಷ್ಯದಲ್ಲಿ ಹೇಳಿದಂತಹಾ ಘಟನೆ ಆಗದೇ ಇರುವುದರಿಂದ ನನಗೆ ಪೋಲೀಸರಿಗೆ ತಿಳಿಸುವ ವಿಷಯ ಉದ್ಭವ ಆಗಿಯೇ ಇಲ್ಲಾ ಎಂದರೆ ಸರಿ ಅಲ್ಲಾ.

ಕೃಷ್ಣಮೂರ್ತಿ ನನಗೆ ರಾತ್ರಿ 8.00 ಗಂಟೆಗೆ ಫೋನು ಮಾಡಿದ್ದರು. ಆಗ ನಾನು ಗಂಗೊಳ್ಳಿ ರಸ್ತೆಯ ತ್ರಾಸಿ ಪಂಚ್ಯಾತ್ ಹತ್ತಿರ ಇದ್ದೆ. ನಾನು ನನ್ನ ಆಟೋದಲ್ಲಿ 3 – 4 ನಿಮಿಷದಲ್ಲಿ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ಅಲ್ಲಿ ಯಾರೂ ಇರಲಿಲ್ಲ ಎಂದರೆ ಸರಿ ಅಲ್ಲಾ. ನಾನು ಸ್ಥಳಕ್ಕೆ ಹೋದಾಗ ಕತ್ತಲೆಯಾಗಿತ್ತು ಎಲ್ಲರ ಕೈಯಲ್ಲಿ ಮೊಬೈಲ್ ಟಾರ್ಚು ಇತ್ತು ನನ್ನ ಕೈಯಲ್ಲಿ ಮೊಬೈಲ್ ಟಾರ್ಚು ಹಿಡಿದುಕೊಂಡು ಅಲ್ಲಿಗೆ ಹೋದೆ ಅಲ್ಲಿ 10 – 15 ಜನ ಇದ್ದಿರಬಹುದು. ಆರೋಪಿತರು ಮತ್ತು ಫಿರ್ಯಾದಿದಾರರು 10 ಫೀಟು ಅಂತರದಲ್ಲಿ ನಿಂತು ಮಾತನಾಡುತ್ತಿದ್ದರು. 2ನೇ ಆರೋಪಿ ಮತ್ತು ಅವಳ ಮಗ ಕೀರ್ತಿ ರಾಜ್ ಹೊಂಡದಲ್ಲಿದ್ದರು 1ನೇ ಆರೋಪಿ ಮೇಲಿದ್ದರು. ಘಟನೆ ಆಗಿದೆ ಅಂತ ನಾನು ಹೇಳಿದಂತಹಾ ಸ್ಥಳದ ಅಕ್ಕ ಪಕ್ಕ ದುಸ್ತಿನಾ ರವರ ಮನೆ, ಶ್ರೀದೇವಿ ಲೇಡೀಸ್ ಟೈಲರ್ ಅಂಗಡಿ, ಪ್ರಕಾಶ್ ರವರ ಗೂಡಾಂಗಡಿ, ಹೋಲಿ ಕ್ರಾಸ್ ಆಶ್ರಮ ಇದೆ ಎಂದರೆ ಸರಿ. ನಾನು ಹೇಳಿದಂತೆ ಆರೋಪಿತರು ಫಿರ್ಯಾದಿದಾರರಿಗೆ ಮತ್ತು ಅವರ ಕುಟುಂಬದವರಿಗೆ ಯಾವತ್ತೂ ಅವಾಚ್ಯ ಶಬ್ದದಿಂದ ಬೈದಿಲ್ಲ, ಜಾತಿ ನಿಂದನೆ ಮಾಡಿಲ್ಲ ಮತ್ತು ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿ ಅಲ್ಲಾ. ಚಾಸಾ.5 ಕೃಷ್ಣ ಮೂರ್ತಿ ನನ್ನ ಸ್ನೇಹಿತನಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ.

**<u>ಮರು ವಿಚಾರಣೆಃ</u>** ಇಲ್ಲ.

**(ನನ್ನ ಉಕ್ತಲೇಖನದಂತೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**